ದಯವಿಟ್ಟು ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕು. ಅಲ್ಲಿ ಪೋಲೀಸ್ ಸ್ಟೇಷನ್ ಹಾಕಿದಿರಾ, ಅಲ್ಲಿ ನಡೆಯುತ್ತಿರುವ ಘಟನೆಯ ಬಗ್ಗೆ ಛಾರ್ಜ್‌ಷೀಟ್ ಹಾಕಿದೆಯೇ, ಕ್ರಮ ತೆಗೆದುಕೊಳ್ಳಲಾಗಿದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಪ್ರಶ್ನೆ ಇರುವುದು 21-11-68 ರಲ್ಲಿ ಲಕ್ಷ ದೀಪೋತ್ಸವ ಹಬ್ಬದಲ್ಲಿ ಏನು ಘಟನೆ ನಡೆದಿದೆ, ಅಂದರೆ ಎಡಿಟರುಗಳು ಮುಂತಾದವರು ಅಲ್ಲಿಗೆ ಹೋದಾಗ ಅಸಾಲ್ಟ್ ನಡೆದಿದೆಯೆ, ಅವರ ರಾಂಗ್‌ಫುಲ್ ಕನ್‌ಫೈನ್‌ಮೆಂಟ್ ಇತ್ತೇ ಎಂಬುದು. ಅದನ್ನು ಬಿಟ್ಟು ಅಲ್ಲಿ ಎಷ್ಟು ಆದಾಯ ಬರುತ್ತದೆ, ಎಷ್ಟು ಖರ್ಚಾಗಿದೆ ಎಂದು ಮುಂತಾಗಿ ಮಾನ್ಯ ಸದಸ್ಯರು ಬೇರೆ ಬೇರೆ ಪ್ರಶ್ನೆಗಳನ್ನು ಕೇಳುವುದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ನಾನು ಈ ಪ್ರಶ್ನೆಗೆ ಐ.ಜಿ.ಪಿ. ನಿಂದ ಬಂದಿರುವ ವರದಿ ಪ್ರಕಾರ ಉತ್ತರ ಕೊಟ್ಟಿದ್ದೇನೆ, ಇನ್‌ಸಿಡೆಂಟ್ ಆದಾಗ ಪತ್ರಿಕೋದ್ಯಮಿಗಳಿಗೆ ರಕ್ಷಣೆ ಕೊಟ್ಟು ಸೇಫ್ ಆಗಿ ಅವರನ್ನು ಕಳಿಸಿದ್ದೇವೆ. ವರದಿಯಲ್ಲಿ ಈ ರೀತಿ ಹೇಳಿದ್ದಾರೆ:

> "So far no complaint was received from the editors against anyone and no further action could be taken by the Police."

ಈ ಸಂಬಂಧದಲ್ಲಿ ಕಂಪ್ಲೈಂಟ್ ಏನೂ ಬಂದಿಲ್ಲವೆಂದು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರು ಕ್ರಮ ತೆಗೆದುಕೊಳ್ಳಬೇಕು, ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲ ಎಂದು ಮುಂತಾಗಿ ಹೇಳುವುದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ಈ ವಿಚಾರದಲ್ಲಿ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಜಾರ್ಜ್ ಫರ್ನಾಂಡೀಸ್‌ರವರು ಪತ್ರ ಬರೆದಿದ್ದರು, ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಬೇರೆ ಯಾರು ಕಂಪ್ಲೈಂಟ್ ಕೊಟ್ಟಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY

(but not taken up)

Lime Stone Deposits

497. Sri L. SRIKANTAIAH (Nanjangud).—

Will the Minister for Industries, Information and Publicity be pleased to state :—

(*a*) whether the Government is aware that rich lime stone deposits are found round about Begoor village, Begoor Hobli, Gundlupet Taluk, Mysore District ;

(*b*) whether a survey has been made by any agency of the Government to find out the quantum of lime stone in the said belt ;

(*c*) the minimum availability of lime stone deposit insisted for the starting of a cement factory ;

(*d*) (i) whether the cement factories at Bhadravathi, Ammasandra and other places command assured supply of lime stone ;

(ii) and if so, what is the quantity ;

(iii) and within what radius of the factory ?

Sri A. P. APPANNA (Deputy Minister for Industries).—

(*a*) Occurrence of lime kankar in Begoor has been known to the Mines and Geology Department.

(*b*) Yes. The Department of Mines and Geology has conducted investigation for lime stone in the Gundlupet taluk and deposits are estimated to be about 10,00,000 tonnes of kankary limestone.

(*c*) The quantity should be at least 10 million tons. The material available at Begoor is lime kankar and not lime stone.

(*d*) Yes.

Bhadravathi : about 40 million tonnes within a radius of 10 to 12 miles.

Ammasandra : about 10 million tonnes within a radius of 6 to 8 miles.

Bagalkot : over 200 million tonnes within a radius of 1 to 4 miles.

Shahabad : over 50 million tonnes within a radius of 1 to 5 miles.

Grant of Forest Land

519. Sri THIRUMALA DEVARAYA (Gangavathi).—

Will the Minister of State for Forests be pleased to state :—

(*a*) the number of applications received for the grant of forest land for cultivation in Gangavathi Taluk;

(*b*) the extent of land in respect of which applications were received and the extent of land granted ?

Sri ALUR HANUMANTHAPPA (Minister of State for Forests).—

(*a*) 46.

(*b*) The area applied for is 391 acres and 31 guntas. 20 acres have been granted lease.

Lease of Land to the Congress Exhibition, Subhas Nagar, Bangalore

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಿನ್ನೆ ಈ ಸಭೆಯಲ್ಲಿ ಕಾಂಗ್ರೆಸ್ ವನ್ನು ಪ್ರದರ್ಶನಕ್ಕೆ ಸುಭಾಸ್ ನಗರದಲ್ಲಿ ಜಾಗವನ್ನು 99 ವರ್ಷಗಳ ಲೀಸ್‌ಗೆ ಕೊಡುವ ಪ್ರಶ್ನೆ ಬಂದಾಗ ಅದನ್ನು ಕೈಬಿಟ್ಟಿದ್ದೇವೆಂದು ಹೇಳಲಿಲ್ಲ, ಮುಖ್ಯ ಮಂತ್ರಿಗಳಿಂದ ಸ್ಪಷ್ಟವಾದ ಉತ್ತರ ಈ ವಿಚಾರದಲ್ಲಿ ಬರಲಿಲ್ಲ. ಆಗ ಮುಖ್ಯ ಮಂತ್ರಿಗಳು ಇರಲಿಲ್ಲ. ಈ ಬಗ್ಗೆ ಮತ್ತೆ ಕೇಳುತ್ತಿದ್ದೇವೆ, ದಯವಿಟ್ಟು ಮಾಡಿ ಮುಖ್ಯ ಮಂತ್ರಿಗಳು ಹೇಳಬೇಕು. 99 ವರ್ಷ ಕಾಂಗ್ರೆಸ್ ಪಕ್ಷಕ್ಕೆ ಲೀಸ್‌ಗೆ ಕೊಡಬೇಕಾದರೆ ಎಲ್ಲ ಪಕ್ಷದವರನ್ನೂ ಕರೆದು ಮಾತುಕತೆ ನಡೆಸಿ ಅದರ ಪ್ರಕಾರ ನಡೆಯುತ್ತೇವೆಂದು ಅವರು ಆಶ್ವಾಸನೆ ಕೊಡಬೇಕು ಸುಮ್ಮನೆ ಒಂದು ರೀತಿ ನಾಚಿಕೆಯಾವಾಗಿ ಹೇಳಿದರು, ಹೊರಟು ಹೋದರು. ಈಗ ಮುಖ್ಯ ಮಂತ್ರಿಗಳು ಇದ್ದಾರೆ ಅವರು ಈ ಬಗ್ಗೆ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಒಂದು ಹೇಳಿಕೆಯನ್ನು ನೀಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳುತ್ತಾ ಇದ್ದೇನೆ.